ಮದುವೆಯಾದ ಮೇಲೆ ಬರೀ ಕರಟ, ಕಬ್ಬಿನ ಸಿಪ್ಪೆ ಯಾಕೆ, ಇನ್ನು ಯಾವುದ್ಯಾವುದೇ ವಿಚಾರಗಳಲ್ಲಿ ಹೆಂಡ್ತಿ ಏನು ಹೇಳುತ್ತಾಳೋ ಅವುಗಳನ್ನೆಲ್ಲಾ ಸರಿ ಅಂತ ಒಪ್ಪಿಕೊಳ್ಳೋದು ಗಂಡಸರ ಲಕ್ಷಣ. ಅಂದ ಮೇಲೆ ಕಸದ ವಿಚಾರದಲ್ಲಿ ಭಿನ್ನರಾಗ ಯಾಕೆ?

ಬೇಲೂರು ರಾಮಮೂರ್ತಿ
ಕಲೆ: ಭಾಸ್ಕರ್



# ಕಸವೆಂಬ ರಸಾನುಭವ ಯಾತ್ರೆ

ಕಸ ಅಂದ್ರೆ ಏನು ಅಂತ ಯಾರೂ ಇಂಥಾದ್ದು ಅಂತ ಹೇಳೋಕೆ ಆಗಲ್ಲ. ನಮಗೆ ಬೇಡದ ವಸ್ತು ಕಸ ಎನ್ನಬಹುದೇನೋ. ಆದರೆ ಒಬ್ಬನ ಆಹಾರ ಇನ್ನೊಬ್ಬನ ವಿಷ ಎನ್ನುವ ಮಾತಿನಂತೆ ಒಬ್ಬರ ಕಸ ಇನ್ನೊಬ್ಬರ ಜೀವನೋಪಾಯ ಎನ್ನಬಹುದು. ಇದಕ್ಕೆ ಉದಾಹರಣೆ ಎಂದರೆ ರಸ್ತೆಯಲ್ಲಿ ಅಲ್ಲಲ್ಲಿ ಕಸ ಸಂಗ್ರಹ ಮಾಡುವವರು. ನಾವು ಕಸ ಎಂದು ಬಿಸಾಡಿರುವ ಹಳೆ ಬಟ್ಟೆ, ಕುಡಿದು ಖಾಲಿ ಮಾಡಿದ ತಂಪು ಪಾನೀಯದ ಬಾಟಲು, ರೊಟ್ಟಿನ ಕವರುಗಳು, ಹಾಳೆಗಳು ಇತ್ಯಾದಿಗಳನ್ನು ಅವರು ತಮ್ಮ ದೊಡ್ಡ ಬ್ಯಾಗಿನಲ್ಲಿ ಸಂಗ್ರಹಿಸುತ್ತಾರೆ. ಬ್ಯಾಗು ತುಂಬಿದೊಡನೆ ಎಲ್ಲೋ ಒಂದು ಕಡೆ ಕೂತು ಅವುಗಳನ್ನು ವಿಂಗಡನೆ ಮಾಡಿ ಮಾರಿದರೆ ಅವರ ಅಂದಿನ ಹೊಟ್ಟೆಯ ಕಥೆ ಕಳೆದಂತೆ. ಕಸ ಇರಲೇಬಾರದು ಎನ್ನುವುದು ಕಷ್ಟ. ನಾವು ಅಂಗಡಿಗಳಿಂದ, ಸೂಪರ್ ಮಾರ್ಕೆಟ್‌ಗಳಿಂದ ತರುವ ಎಲ್ಲ ಪದಾರ್ಥಗಳನ್ನು ಪ್ಯಾಕ್ ಮಾಡಿರುವುದು ನಂತರ ಅದು ಕಸವೇ. ಅಷ್ಟೇ ಏಕೆ ಇವತ್ತು ಓದಿದ ವೃತ್ತಪತ್ರಿಕೆ ನಾಳೆಗೆ ಕಸವೇ. ಎಲ್ಲವನ್ನೂ ಒಟ್ಟು ಮಾಡಿ ತಿಂಗಳು ಎರಡು ತಿಂಗಳುಗಳಿಗೊಮ್ಮೆ ಪೇಪರ್ ಎಂದು ಕೂಗಿಕೊಂಡು ಬರುವವನಿಗೆ ಮಾರುವುದು ಪ್ರತಿ ಮನೆಯಲ್ಲೂ ನಡೆಯುವಂಥದ್ದು.

ಸೋಮು ಮನೆಯಲ್ಲೂ ಕಸ ವಿಲೇವಾರಿ ಹೀಗೇ ನಡೀತಿದೆ. ಆದರೆ ಕಸ ವಿಲೇವಾರಿ ಮಾಡುವ ಕೆಲಸ ಏನಿದ್ದರೂ ಸೋಮಿದು. ಸೋಮು ಈ ವಿಚಾರದಲ್ಲಿ ನಿರಾಳ. ಆದರೆ ಹಸಿ ಕಸ ಮತ್ತು ಒಣ ಕಸ ಯಾವುದೆನ್ನುವ ವಿಚಾರದಲ್ಲಿ ಎರಡೆರಡು ದಿನಕ್ಕೆ ಅವರಲ್ಲಿ ವಾಗ್ವಾದ ನಡೆಯುತ್ತಲೇ ಇರುತ್ತದೆ. ಮನೆಯ ಕಸವನ್ನು ಸೋಮು ಸರಿಯಾದ ಬಕೇಟಿಗೇ ಹಾಕದಿದ್ದರೆ ಸೋಮಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಆದರೆ ವೆಟ್ ಮತ್ತು ಡ್ರೈ ವಿಚಾರದಲ್ಲಿ ಸೋಮುಗೆ ಗೊಂದಲ ಮಾತ್ರ ಪರಿಹಾರವಾಗೇ ಇಲ್ಲ. ರೀ ನಿಮಗೆ ಅಷ್ಟೂ ಗೊತ್ತಾಗಲ್ವೇನ್ರೀ ಅಂತ ಸೋಮಿ ಎಷ್ಟು ದಿವಸ ಹೇಳಿದಾಳೋ. ಹಣ್ಣು ವೆಟ್ ಕಸ ಆದರೆ ಅದರ ಸಿಪ್ಪೆ ಡ್ರೈ ಕಸ ಅಂತ ಸೋಮು ಅಭಿಪ್ರಾಯ. ಆದರೆ ಸೋಮಿ ಹಣ್ಣು ಅಂದರೆ

